ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 06-11-2021 ರಂದು ಪಾಲಿಕೆಯ ಮುಖ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ 2020-21ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ ನಅಇ 06 ಎಂ.ಎನ್.ವೈ 2021 ದಿನಾಂಕ: 29-04-2021 ರಂತೆ ಕ್ರೀಯಾ ಯೋಜನೆಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದ್ದು, ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ನೀಡುವ ಬಗ್ಗೆ ರಚಿಸಲಾಗಿರುವ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ಅಧಿಕಾರಿಗಳು:

1. ಮುಖ್ಯ ಆಯುಕ್ತರು : ಅಧ್ಯಕ್ಷರು
2. ವಿಶೇಷ ಆಯುಕ್ತರು(ಯೋಜನೆ) : ಉಪಾಧ್ಯಕ್ಷರು
3. ವಿಶೇಷ ಆಯುಕ್ತರು(ಘತ್ಯಾನಿ) : ಸದಸ್ಯರು
4. ಪ್ರಧಾನ ಅಭಿಯಂತರರು : ಸದಸ್ಯರು
5. ಮುಖ್ಯ ಲೆಕ್ಕಾಧಿಕಾರಿಗಳು : ಸದಸ್ಯರು
6. ಮುಖ್ಯ ಅಭಿಯಂತರರು(ಯಲಹಂಕ ವಲಯ) : ಸದಸ್ಯ ಕಾರ್ಯದರ್ಶಿ

ಪಾಲಿಕೆ ವ್ಯಾಪ್ತಿಯಲ್ಲಿ ಘನ ಸರ್ಕಾರದ ಸರ್ಕಾರದ ಆದೇಶ ಸಂಖ್ಯೆ:ನಅಇ 06 ಎಂಎನ್‌ವೈ 2021, ಬೆಂಗಳೂರು, ದಿನಾಂಕ:29.04.2021 ರ ಆದೇಶದಂತೆ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ರೂ.25.00 ಕೋಟಿಗಳ ಅನುದಾನ ಮೀಸಲಿರಿಸಿದ್ದು, ರೂ.11.00 ಕೋಟಿಯ ಮೊತ್ತದಲ್ಲಿ ವಾರ್ಡ್ ನಂ:06ರ ವ್ಯಾಪ್ತಿಯಲ್ಲಿನ 110 ಹಳ್ಳಿಗಳ ರಸ್ತೆಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೀರಿನ ಪೈಪ್‌ಲೈನ್ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಲು ಅಗೆದಿದ್ದು, ಅಗೆದ ಭಾಗಗಳು ಪುನಶ್ಚೇತನವಾಗಿರದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಸದರಿ ರಸ್ತೆಗಳನ್ನು ತುರ್ತಾಗಿ ದುರಸ್ಥಿಗೊಳಿಸಬೇಕಾಗಿರುವುದರಿಂದ ಕ್ರಿಯಾಯೋಜನೆಗೆ ಕೆಲವೊಂದು ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿರುತ್ತದೆ.

ಮುಂದುವರೆದಂತೆ, ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ಪ್ರಸ್ತಾಪಿತ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು, ಯೋಜನೆಯ ಕಾಮಗಾರಿಗೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) ರವರು ನೀಡಿರುವ ತಾಂತ್ರಿಕ ವರದಿಯನ್ನು ಪರಿಶೀಲಿಸಿ, ದೃಢೀಕರಿಸಿ, ಮೌಲ್ಯಮಾಪನಕ್ಕೆ ವಿಷಯ ಪಟ್ಟಿಯನ್ನು ತಯಾರಿಸಿ ಟೆಂಡರ್ ಮೌಲ್ಯಮಾಪನ ಸಮಿತಿ ಮುಂದೆ ತಾಂತ್ರಿಕ ಅನುಮೋದನೆಗೆ ಮಂಡಿಸಲಾಗಿದೆ ಎಂದು ಸಮಿತಿಗೆ ತಿಳಿಸಿರುತ್ತಾರೆ.

ಈ ವಿಷಯವಾಗಿ ದಿನಾಂಕ:06-11-2021 ರಂದು ಟೆಂಡರ್ ಮೌಲ್ಯಮಾಪನ ಸಮಿತಿಯು, ಮೌಲ್ಯಮಾಪನಕ್ಕೆ ವಿಷಯ ಪಟ್ಟಿಯ ಯೋಜನೆಗಳ ತಾಂತ್ರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ

ಪ್ರಸ್ತಾಪಿತ ಟೆಂಡರ್ ಮೌಲ್ಯಮಾಪನ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ತಾಂತ್ರಿಕ ವರದಿಯನ್ನು ಪರಿಶೀಲಿಸಿ, ದೃಢೀಕರಿಸಿ ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಟೆಂಡರ್ ಮೌಲ್ಯಮಾಪನ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ಟೆಂಡರ್ ಮೌಲ್ಯಮಾಪನ ಸಮಿತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ 2000ರಂತೆ ಹಾಗೂ ಇತ್ತೀಚೆಗೆ ಹೊರಡಿಸಿದ ಸರ್ಕಾರಿ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತಾ, ಇದರನ್ವಯ ಟೆಂಡರ್ ಮೌಲ್ಯಮಾಪನ ವರದಿಯನ್ನು ತಯಾರಿಸಲಾಗಿದೆ ಎಂದು ಸಭೆಗೆ ತಿಳಿಸಿರುತ್ತಾರೆ.

1. ಗುತ್ತಿಗೆದಾರರ ವಾರ್ಷಿಕ ವಹಿವಾಟಿನ ಮೌಲ್ಯವನ್ನು Standard tender document KW-4 clause -3.2 (a) ಗೆ ಅನ್ವಯ ಟೆಂಡರ್ ಆಹ್ವಾನಿಸಿರುವ ಸಾಲಿಗೆ ಸಮೀಕರಿಸುವ ಸಲುವಾಗಿ ವಾರ್ಷಿಕ 10% Weightage ನೀಡಲಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ : No.FD 480 Exp-12/2014, Bangalore date: 19-07-2014 Standard tender document KW-4 clause -3.2 (b) ಗೆ ಸಂಬಂಧಿಸಿದಂತೆ ಸಮಾನ ರೂಪದ ಕಾಮಗಾರಿಯ ಮೊತ್ತ ಟೆಂಡರ್‌ಗಿಟ್ಟ ಮೊತ್ತದ ಶೇ.50 ರಷ್ಟು ಎಂದು ಪರಿಗಣಿಸಲಾಗಿದೆ.
3. Standard tender document clause -15.2 ಮತ್ತು 3.2 ಬಿ ಪರಿಗಣಿಸಲಾಗಿದೆ.

ವಿಷಯ ಸಂಖ್ಯೆ :01

ಅನುಮೋದನೆಗೊಂಡಿರುವ ಕಾಮಗಾರಿಯ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯ ಮುಖ್ಯಾಂಶಗಳು ಈ ಕೆಳಕಂಡಂತಿವೆ ಎಂದು ಟೆಂಡರ್ ಮೌಲ್ಯಮಾಪನ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ತಿಳಿಸಿರುತ್ತಾರೆ.

ಕ್ರ ಸಂ	ಕಾಮಗಾರಿಯ /ಪ್ಯಾಕೇಜ್ ಕಾಮಗಾರಿಗಳ ಹೆಸರು ಸರ್ಕಾರದ ಆದೇಶ ಸಂಖ್ಯೆ ನಅಇ 06 ಎಂ.ಎನ್.ವೈ 2021 ದಿನಾಂಕ: 29-04-2021.	ಟೆಂಡರ್‌ಗಿಟ್ಟ ಮೊತ್ತ ರೂಗಳಲ್ಲಿ	ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು	ಅರ್ಹತೆ/ ಅನರ್ಹತೆ ಹೊಂದಿರುವ ವಿವರಗಳು	ಷರಾ
1)	Improvements and Restoration of roads in Ward No. 06 (Package 02) (Package Consists of 11 works)	9,62,42,550.98	**A SURYA PRAKASH (KARTHIK ENTERPRISES)**	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.	Technically Qualified
			ABHIJIT A	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ Work Done Certificate and LOC Certificate uploaded, but not confirmed by Concerned Office and Bank when requested by this office	Technically Dis-Qualified

			C G CHANDRAPPA (CGC INFRA PROJECTS PRIVATE LIMITED)	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.	Technically Qualified
			M YOGESH (PROFFESSIONAL GLOBAL INFRASTRUCTURES PRIVATE LIMITED)	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ Work Done Certificate and LOC Certificate uploaded, but not confirmed by Concerned Office and Bank when requested by this office. ಮತ್ತು ಕಾಮಗಾರಿಗೆ ಅವಶ್ಯಕವಾದ ಯಂತ್ರೋಪಕರಣಗಳನ್ನು ಹೊಂದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ.	Technically Dis-Qualified
			RAJESWAREN SATHEESH (SATHYA CONSTRUCTIONS)	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ Work Done Certificate and LOC Certificate uploaded, but not confirmed by Concerned Office and Bank when requested by this office	Technically Dis-Qualified

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ 19-09-2021 ರಂದು ತೆರೆಯಲಾಗಿದ್ದು, ಈ ಟೆಂಡರ್‌ನಲ್ಲಿ ಭಾಗವಹಿಸಿರುವ ಬಿಡ್‌ದಾರರು ಸಲ್ಲಿಸಿರುವ ***Annual turn over, Work done certificate, Line of Credit, Required Machinery details & Bid Capacity.*** ದಾಖಲಾತಿಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ದೃಡೀಕರಿಸಿಕೊಳ್ಳಲಾಗಿರುವುದಾಗಿ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗ ಮತ್ತು ಮುಖ್ಯ ಅಭಿಯಂತರರು ಯಲಹಂಕ ವಲಯರವರು ತಾಂತ್ರಿಕ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ತಿಳಿಸಿದ್ದು, ಟೆಂಡರ್‌ನಲ್ಲಿ ವಿಧಿಸಲಾಗಿರುವ ತಾಂತ್ರಿಕ ಷರತ್ತು / ನಿಬಂಧನೆಗಳನ್ವಯ ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಿ ದೃಢೀಕರಿಸಿರುವುದಾಗಿ ಮತ್ತು 1) ABHIJIT A, 2) M YOGESH (PROFFESSIONAL GLOBAL INFRASTRUCTURES PRIVATE LIMITED), 3) RAJESWAREN SATHEESH (SATHYA CONSTRUCTIONS) ರವರನ್ನು KW-4 Standard Tender Document ಅನುಸಾರ ಷರತ್ತುಗಳನ್ನು ಪೂರೈಸದ ಕಾರಣ ಹಾಗೂ ಮೇಲಿನ ಕೋಷ್ಟಕದಲ್ಲಿ ವಿವರಿಸಿರುವ ವಿವರಣೆಗಳಂತೆ ತಾಂತ್ರಿಕವಾಗಿ ಅನರ್ಹಗೊಳಿಸಲಾಗಿದೆಯೆಂದು ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ತಿಳಿಸಿರುತ್ತಾರೆ.

ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುವ ಬಿಡ್‌ದಾರರಾದ 1) A SURYA PRAKASH (KARTHIK ENTERPRISES), 2) C G CHANDRAPPA (CGC INFRA PROJECTS PRIVATE LIMITED) ರವರು KW-4 Standard Tender Document ಅನುಸಾರ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವುದರಿಂದ ತಾಂತ್ರಿಕವಾಗಿ ಅರ್ಹಗೊಳಿಸಲಾಗಿದೆ ಆದುದರಿಂದ

ಸದರಿಯವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಕ್ರಮಕೈಗೊಳ್ಳಲು ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂದಾನ ಸಮಿತಿಯ ಮುಂದೆ ಟಿಪ್ಪಣಿ ಪರಿಶೀಲಿಸಲಾಯಿತು.

<u>ತೀರ್ಮಾನ</u> :

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) ರವರು ಸಿದ್ಧಪಡಿಸಿರುವ ತಾಂತ್ರಿಕ ತುಲನಾತ್ಮಕ ಪಟ್ಟಿಯನ್ನು ಅವಲೋಕಿಸಲಾಯಿತು. ಸದರಿ ತುಲನಾತ್ಮಕ ಪಟ್ಟಿಯಂತೆ ಬಿಡ್‌ದಾರರಾದ **1) A SURYA PRAKASH (KARTHIK ENTERPRISES) 2) C G CHANDRAPPA (CGC INFRA PROJECTS PRIVATE LIMITED)** ರವರು ತಾಂತ್ರಿಕವಾಗಿ ಅರ್ಹತೆಯನ್ನು ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್ಡನ್ನು ಅಂಗೀಕರಿಸಿ ಆರ್ಥಿಕ ಬಿಡ್ಡನ್ನು ತೆರೆಯಲು ಸಭೆಯು ತೀರ್ಮಾನಿಸಿತು.

ಮುಖ್ಯ ಅಭಿಯಂತರರು
ಯಲಹಂಕ ವಲಯ
(ಸದಸ್ಯ ಕಾರ್ಯದರ್ಶಿ)

ಪ್ರಧಾನ ಅಭಿಯಂತರರು
ಬಿಬಿಎಂಪಿ (ಸದಸ್ಯರು)

ಮುಖ್ಯ ಲೆಕ್ಕಾಧಿಕಾರಿ,
ಬಿಬಿಎಂಪಿ ಸದಸ್ಯರು.

ವಿಶೇಷ ಆಯುಕ್ತರು (ಪಣಕಾಸು)
(ಸದಸ್ಯರು)

ವಿಶೇಷ ಆಯುಕ್ತರು (ಘತ್ಯಾನಿ)
(ಸದಸ್ಯರು)

ವಿಶೇಷ ಆಯುಕ್ತರು (ಯೋಜನೆ)
(ಉಪಾಧ್ಯಕ್ಷರು)

ಮುಖ್ಯ ಆಯುಕ್ತರು
ಹಾಗೂ ಅಧ್ಯಕ್ಷರು, ತಾಂತ್ರಿಕ
ಮೌಲ್ಯಮಾಪನ/ಆರ್ಥಿಕ ಮೌಲ್ಯ
ಮಾಪನ ಮತ್ತು ದರಸಂಧಾನ ಸಮಿತಿ
(ಅಧ್ಯಕ್ಷರು)